ಶ್ರೀ ಶ್ರೀರಂಗದೇವರಾಯಲು :—ಗಂಗಾವತಿಯ ಅಪ್ಪರ್ ಮತ್ತು ಲೋಯರ್ ಕೆನಾಲ್‌ನಲ್ಲಿ ಎಷ್ಟು ನೀರಿದೆ ? ಏಪ್ರಿಲ್ ಮಂತ್ತು ಮೇ ತಿಂಗಳಲ್ಲಿ ಮಾತ್ರ ನೀರು ಕಡಿಮೆ ಇದ್ದು ಫೀಡ್ ಆಗುತ್ತಿಲ್ಲ. ಅಲ್ಲಿ ಕೆಲವು ಬಂಡೆಗಳು ಇವೆ. ಅವನ್ನು ಒಡೆದು ಸರಿ ಮಾಡಿದರೆ ಲೋಯರ್ ಮತ್ತು ಅಪ್ಪರ್ ಕೆನಾಲ್ ನಿಂದ ದೊಡ್ಡ ಪ್ರಮಾಣದಲ್ಲಿ ನೀರು ಸರಬರಾಜು ಆಗುತ್ತದೆ. ಅದಷ್ಟು ಕಡಿಮೆ ಹಣದಲ್ಲಿ ಅದನ್ನು ಮಾಡಿಸಬಹುದು. ಆನೇಗುಂದಿ ಕೆನಾಲ್ ಬಗ್ಗೆಯೂ ಮಾನ್ಯ ಮಂತ್ರಿಗಳು ಉತ್ತರಿಸಿದ್ದಾರೆ. ಬಳ್ಳಾರಿ ಜಿಲ್ಲೆಗೆ ಒಂದು ಧೋರಣೆ, ರಾಯಚೂರು ಜಿಲ್ಲೆಗೆ ಒಂದು ಧೋರಣೆಯಿಂದ ನೋಡುತ್ತಿದ್ದಾರೆ. ರೈತರ ಬಗ್ಗೆ ಒಂದೊಂದು ಧೋರಣೆ ತಾಳುವುದನ್ನು ನಾನು ಇಷ್ಟಪಡುವುದಿಲ್ಲ. ಬಳ್ಳಾರಿ ಜಿಲ್ಲೆ ಬಗ್ಗೆ ಏನು ಧೋರಣೆ ತಾಳಿದ್ದಾರೆ ಅದೇ ಧೋರಣೆ ರಾಯಚೂರು ಜಿಲ್ಲೆಯ ಬಗ್ಗೆಯೂ ತೋರಬೇಕೆಂದು ಹೇಳುತ್ತೇನೆ. ರಾಯಚೂರು ಜಿಲ್ಲೆಯನ್ನು ಬಹಳ ಕೀಳಾಗಿ ನೋಡುತ್ತಿದ್ದಾರೆ. ಬಳ್ಳಾರಿ ಜಿಲ್ಲೆಯ ರೈತರ ಬಗ್ಗೆ ಏನು ಕಾಳಜಿ ವಹಿಸುತ್ತಿದ್ದೀರಿ, ಅದೇ ರೀತಿ ನಮ್ಮ ಜಿಲ್ಲೆಯಲ್ಲಿ ಕೂಡ ಮಾಡಿ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ .—ಮಾನ್ಯ ಸದಸ್ಯರ ಆಪಾದನೆ ಸರಿಯಾದುದಲ್ಲ. ರಾಜ್ಯದ ಎಲ್ಲ ರೈತರೂ ಒಂದೇ ನವಿಗೆ. ಬಳ್ಳಾರಿ ರೈತರೂ ಒಂದೇ, ರಾಯಚೂರಿನ ರೈತರೂ ಒಂದೇ ಸರ್ಕಾರದ ವತಿಯಿಂದ ನೀರು ಕೊಟ್ಟರೆ, ವಾಟರ್ ರೇಟ್, ಕಂದಾಯ ಎಲ್ಲ ತೆಗೆದುಕೊಳ್ಳುತ್ತೇವೆ. ಯಾವ ರೈತರಿಗೂ ಹಾಗೇ ನೀರು ಕೊಡುವುದಿಲ್ಲ. ರೈತ ಬೆಳೆದರೆ ನಾಡು ಸಮೃದ್ಧವಾಗುತ್ತದೆ. ಬಳ್ಳಾರಿಗೆ ಜಾಸ್ತಿ, ರಾಯಚೂರಿಗೆ ಕಡಿಮೆ ಕೊಡತಕ್ಕದ್ದು ನಮ್ಮಲ್ಲಿ ಇಲ್ಲ. ನಿಷ್ಪಕ್ಷಪಾತವಾಗಿ ಆನೆಗುಂದಿ ಮತ್ತು ನಿಮ್ಮ ನಾಲೆಗೆ ನೀರು ಬಿಡತಕ್ಕದ್ದಕ್ಕೆ ತಕ್ಕ ಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ ಏನು ನೀರು ಬಿಟ್ಟರೂ ನಾಲೆಗಳು ಆಧುನೀಕರಣವಾಗದಿದ್ದರೆ ನೀರು ಅಚ್ಚುಕಟ್ಟಿಗೆ ಹೋಗುವುದಕ್ಕೆ ಬದಲಾಗಿ ಹೊರಗೆ ಹೋಗುತ್ತದೆಂದು ಅವರಿಗೆ ಗೊತ್ತಾಗಿದೆ. ಮೊದಲು ಈ ಕಾರ್ಯವನ್ನು ಮಾಡಿದರೆ ಅವರ ಸಮಸ್ಯೆ ಬಹಳ ಬೇಗ ಬಗೆಹರಿಯುತ್ತದೆಂದು ನಂಬಿದ್ದೇನೆ. ಆ ದಿಸೆಯಲ್ಲಿ ನಾವು ಕೆಲಸ ಮಾಡುತ್ತೇವೆ. ಶ್ರೀರಂಗದೇವರಾಯಲು ಅವರು ಕೂಡ ಬಹಳ ಕಳಕಳಿಯಿಂದ ರೈತರಿಗೆ ನೀರು ಒದಗಿಸತಕ್ಕ ಕಾರ್ಯವನ್ನು ಮಾಡಿದ್ದಾರೆ : ಇದರಿಂದ ರೈತರು ಬಹಳಷ್ಟು ಮಟ್ಟಿಗೆ ಪ್ರಯೋಜನವನ್ನು ಪಡೆದಿದ್ದಾರೆ ; ಬದಲಿ ಉತ್ತಮವಾದ ಬೆಳೆಯನ್ನು ತೆಗೆದಿದ್ದಾರೆಂದು ಅವರೇ ಹೇಳಿದ್ದಾರೆ. ಸರ್ಕಾರದ ವತಿಯಿಂದ ಯಾವಾಗಲೂ ಇಬ್ಬಗೆಯ ನೀತಿ ಆಗುವುದಿಲ್ಲ, ಅನಾನುಕೂಲವಾಗುವುದಿಲ್ಲವೆಂದು ತಿಳಿಸಬಯಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸಚಿವರು ಆ ಮನೆಯಲ್ಲಿರುವುದರಿಂದ ಶ್ರೀ ಪೆರಿಕಲ್ ಎಂ. ಮಲ್ಲಪ್ಪನವರ ಗಮನ ಸೆಳೆಯುವ ಸೂಚನೆಯನ್ನು ಅವರು ಬಂದ ಮೇಲೆ ತೆಗೆದುಕೊಳ್ಳುತ್ತೇನೆ.

ಈಗ ಸದನ ಮುಂದುವರೆದು ಮಂತ್ರಿ ೨.೦೫ಕ್ಕೆ ಸಮಾವೇಶಗೊಳ್ಳುತ್ತದೆ.

ಸದನವು ಮಧ್ಯಾಹ್ನ ೧.೦೫ ಕ್ಕೆ ಮುಂದೂಡಲ್ಪಟ್ಟು ಪುನಃ ೨.೦೫ ಕ್ಕೆ ಸಮಾವೇಶಗೊಳ್ಳುವುದಾಗಿ ನಿಶ್ಚಯಿಸಲಾಯಿತು.

(ಸದನವು ೨ ಗಂಟೆ ೧೫ ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು)
(ಮಾನ್ಯ ಅಧ್ಯಕ್ಷರು ಶ್ರೀ ಎಸ್. ಎಂ. ಕೃಷ್ಣ ಪೀಠವನ್ನು ಅಲಂಕರಿಸಿದರು.)

ನಿಯಮ 334 ರ ಮೇರೆಗೆ

(1) ಶರಾವತಿ, ಲಿಂಗನಮಕ್ಕಿ ಜಲಾಶಯದಲ್ಲಿ ಜಮೀನನ್ನು ಮುಳುಗಡೆಯಾದ ರೈತರಿಗೆ ಅರಣ್ಯ ಅಧಿಕಾರಿಗಳಿಂದ ಕಿರುಕುಳ

† ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆ ಹೊಸನಗರ ಕ್ಷೇತ್ರದ ದೋಬೈಲು, ಮಸಕಾನಿ ಕೋಡಿ, ಆಡಿನ ಕೊಟ್ಟಿಗೆ, ಕಲ್ಲಕೊಪ್ಪ, ಮಂಜರಿ ಕೊಪ್ಪ ಎಂಬ ಊರುಗಳಲ್ಲಿ ಶರಾವತಿ, ಲಿಂಗನಮಕ್ಕಿ, ಮುಳುಗಡೆ ರೈತರು ನೆಲೆಸಿ ವಾಸಿಸುತ್ತಿದ್ದಾರೆ. ಇಡೀ ದೇಶಕ್ಕೆ ಬೆಳಕು ಕೊಡಲು ಅವರು ಬೆಳೆದ ಮರ ಗಿಡ ಕಟ್ಟಿದ ಮನೆ ಎಲ್ಲವನ್ನೂ ನೀರಿನಲ್ಲಿ ತೇಲಿ ಬಿಟ್ಟು ಅಲ್ಪಸ್ವಲ್ಪ ಜಮೀನು ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ. ಸುಮಾರು ೩೦ ವರ್ಷಗಳಿಂದ ಸ್ವಾಧೀನ ಅನುಭವದಲ್ಲಿರುವ ಭೂಮಿಯನ್ನು ಹಿಂದಿನ ಸರ್ಕಾರ ಮತ್ತು ಇಂದಿನ ಸರ್ಕಾರ ಮಂಜೂರಾತಿಮಾಡಿ ಸಾಗುವಳಿ ಚೀಟಿ ಕೊಟ್ಟಿಲ್ಲ. ಸಾಗುವಳಿಯಲ್ಲಿರುವ ಭೂಮಿಯಲ್ಲಿ ಭತ್ತ, ಕಬ್ಬು, ರಾಗಿ, ಹತ್ತಿ ಬೆಳೆಯನ್ನು ಬೆಳೆಯುತ್ತಿದ್ದಾರೆ. ಈಗಾಗಲೇ ಬಿತ್ತನೆ ಆಗಿರುವ ಹಸನಾದ ಜಮೀನಿನ ಮೇಲೆ ಅರಣ್ಯ

ವಲಯ ಅರಣ್ಯ ಅಧಿಕಾರಿ ಶ್ರೀ ಸುಬ್ರಹ್ಮಣ್ಯ ಮತ್ತು ಫಾರೆಸ್ಟರ್ ನಾಗಪ್ಪ ಎಂಬುವರು ಆನೆಗಳಿಂದ ಬೆಳೆಯನ್ನು ತುಳಿಸಿ ಹಾನಿ ಮಾಡಿರುತ್ತಾರೆ. ಅಲ್ಲದೆ ಮಹಿಳೆಯರ ಮೇಲೆ ಮತ್ತು ಶಾಲಾ ಮಕ್ಕಳ ಮೇಲೆ ಹಲ್ಲೆ ನಡೆಸಿ ಮುಗ್ಧ ರೈತರ ಬಾಳು ಕಣ್ಣೀರ ಕೂಳು ಆಗಿದೆ. ಭಯ ಭೀತರಾದ ಮುಳುಗಡೆ ರೈತರು ತಮ್ಮ ಮನೆ, ಜಮೀನು ಬಿಟ್ಟು ಹೋಗಿರುವ ನಿದರ್ಶನಗಳು ಈಗಾಗಲೇ ಬಂದಿದೆ. ತಮ್ಮ ಬಳಿಗೆಯ ರಕ್ಷಣೆಗಾಗಿ ಈಗ ಈ ರಾಜ್ಯದಲ್ಲಿ ಕಾಂಗ್ರೆಸ್ಸನ್ನು ಗೆಲ್ಲಿಸಿದ ಕಾಂಗ್ರೆಸ್ ಕಾರ್ಯಕರ್ತರಿಗೆ ನರಕ ಯಾತನೆಯಿಂದ ಅತೀವ ಹಿಂಸೆಯಾಗಿದೆ. ಸಂಬಂಧಪಟ್ಟ ಅಧಿಕಾರಿಗಳನ್ನು ಕೂಡಲೇ ಅಮಾನತ್ತಿನಲ್ಲಿ ಇಟ್ಟು ಮೇಲಂಡ ರೈತರಿಗೆ ರಕ್ಷಣೆ ಕೊಟ್ಟು ಹಾನಿ ಆದ ಬೆಳೆ ಪರಿಹಾರ ಕೊಡಿಸಿಕೊಡಬೇಕೆಂದು ಅಧ್ಯಕ್ಷರ ಮೂಲಕ ಅರಣ್ಯ ಮಂತ್ರಿಗಳಲ್ಲಿ ಆಗ್ರಹ ಪಡಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನೆ ಖಾತೆಯ ಸಚಿವರು).—ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆ, ಹೊಸನಗರ ಕ್ಷೇತ್ರದ ದೋಬೈಲ, ಮಸಕಾನೆ, ಕೋಡಿ, ಆಡಿನಕೊಟ್ಟಿಗೆ ಕಲ್ಲಕೊಪ್ಪ ಮಂಜರಿಕೊಪ್ಪ ಎಂಬ ಊರುಗಳಲ್ಲಿ ಶರಾವತಿ ಪ್ರಾಜೆಕ್ಟ್ ಮುಳುಗಡೆ ರೈತರು ಜಮೀನು ಸಾಗುವಳಿ ಮಾಡುತ್ತಿರುವುದಂ ಅಧಿಕೃತವಾಗಿ ಅಲ್ಲ ಅವರು ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದಾರೆ. ಇದರ ಬಗ್ಗೆ ಶಿವಮೊಗ್ಗ ಉಪ-ಅರಣ್ಯ ಸಂರಕ್ಷಣಾಧಿಕಾರಿಯವರು ಆಗಿನ ಸರ್ಕಾರದ ಆಜ್ಞೆಯಂತೆ ಅತಿಕ್ರಮಣವು ೧೯೭೮ನೇ ಇಸವಿಗಿಂತ ಮುಂಚೆ ಆದ ಕಡೆಗಳಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ—೧೯೮೦ ರ ಪ್ರಕಾರ ಅತಿಕ್ರಮಣವನ್ನು ಸರಿಗೊಳಿಸಲು, ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಆದರೆ ಈ ಅತಿಕ್ರಮಣ ದಿಂದ ಜಮೀನು ಸಾಗುವಳಿ ಮಾಡತಕ್ಕ ಪ್ರದೇಶ ಶೆಟ್ಟಿಹಳ್ಳಿ ಗೇಮ್ಸ್ ಸ್ಯಾಂಕ್ಚರಿಗೆ ಬರುತ್ತದೆ. ಆದುದರಿಂದ ಅತಿಕ್ರಮಣವನ್ನು ಅಲ್ಲಿ ಸಕ್ರಮಗೊಳಿಸಲು ಕಷ್ಟವಾಗುವುದು. ಆದಕ್ಕಾಗಿ ಶಿವಮೊಗ್ಗ ಜಿಲ್ಲಾಧಿಕಾರಿಯವರು ಮತ್ತು ಉಪ-ಅರಣ್ಯ ಸಂರಕ್ಷಣಾಧಿಕಾರಿ ಶಿವಮೊಗ್ಗ ವಿಭಾಗ, ಶಿವಮೊಗ್ಗ ಇವರು ಶೆಟ್ಟಿಹಳ್ಳಿ ಗೇಮ್ಸ್ ಸ್ಯಾಂಕ್ಚರಿಯಲ್ಲಿ ಆಗಿರತಕ್ಕ ಅತಿಕ್ರಮಣವನ್ನು ಸಕ್ರಮಗೊಳಿಸಲು ಗೇಮ್ಸ್ ಸ್ಯಾಂಕ್ಚರಿಗೆ ಹೊರಗಡೆ ಪ್ರದೇಶದಲ್ಲಿ ಸಾಗುವಳಿ ಮಾಡಲು ಸಾಧ್ಯವೇ ಎಂಬುದನ್ನು ಪರಿಶೀಲಿಸುತ್ತಿದ್ದಾರೆ.

ಅತಿಕ್ರಮಣವು ೧೯೭೮ನೇ ಇಸವಿ ತದ ನಂತರ ಆಗಿದ್ದರೆ ಅದನ್ನು ಸಕ್ರಮಗೊಳಿಸಲು ಆಗುವುದಿಲ್ಲ.

ದೋಬೈಲು ಗ್ರಾಮದ ಹೊಸದಾಗಿ ಅರಣ್ಯ ಜಮೀನಿನಲ್ಲಿ ಅತಿಕ್ರಮಣ ಮಾಡಲಂ ಕೆಲವು ರೈತರು ಪ್ರಯತ್ನಿಸಿದಾಗ, ಅದನ್ನು ಸಿರಿಗೆರೆ ವಲಯ ಅರಣ್ಯಾಧಿಕಾರಿಯವರು ತಪ್ಪಿಸಿರುತ್ತಾರೆ. ಮುಂದೆ ಇಂತಹ ಅತಿಕ್ರಮಣ ಆಗದಿರಲು ಸಿರಿಗೆರೆ ವಲಯದಲ್ಲಿ ದೋಬೈಲು ಗ್ರಾಮದ ಸುತ್ತು ಸುಮಾರು ೫ ಕಿಲೋ ಮೀ. ನಷ್ಟು ಕಂದಕವನ್ನು ತೋಡಿ ಆ ಪ್ರದೇಶದಲ್ಲಿ ಸುಮಾರು ೩೦ ಎಕರೆ ಜಮೀನಿನಲ್ಲಿ ಅರಣ್ಯ ಅಭಿವೃದ್ಧಿಯನ್ನು ತೆಗೆದುಕೊಳ್ಳಲಾಗಿದೆ. ಈ ರೀತಿ ಕಂದಕವನ್ನು ತೋಡುವಾಗ ೧೯೭೮ನೇ ಇಸವಿಗಿಂತ ಮುಂದೆ ಆದ ಅತಿಕ್ರಮಣ ಪ್ರದೇಶವನ್ನು ಬಿಟ್ಟು ಕಂದಕವನ್ನು ತೋಡಿರುತ್ತಾರೆ. ಆದರೆ ಕೆಲವು ರೈತರು ಕಂದಕವನ್ನು ತೋಡಿ ಆದ ಮೇಲೂ ಸಹ ಮತ್ತು ಅರಣ್ಯ ಅಭಿವೃದ್ಧಿ ಕಾರ್ಯವನ್ನು ತೆಗೆದುಕೊಂಡರೂ ಸಹ ಹತ್ತಿ ಬೆಳೆ ಬೆಳೆಯಲು ಅರಣ್ಯ ಪ್ರದೇಶವನ್ನು ಪ್ರವೇಶಿಸಲು ಪ್ರಯತ್ನಿಸಿದವರನ್ನು ವಲಯ ಅರಣ್ಯಾಧಿಕಾರಿಯವರು ಅವರನ್ನು ತಡೆಗಟ್ಟಿದ್ದಾರೆ. ಈ ಪ್ರದೇಶದಲ್ಲಿ ಕೆಲವು ಮರಮಂಟ್ಟುಗಳನ್ನು ಅರಣ್ಯ ಪ್ರದೇಶದಿಂದ ತೆಗೆಯಲು ಅನೆಯನ್ನು ಬಳಸಿಕೊಂಡಿರೇ ವಿನಃ ಯಾವುದೇ ಮಹಿಳೆಯರ ಮೇಲೆ ಅಥವಾ ಶಾಲಾ ಮಕ್ಕಳ ಮೇಲೆ ಹಲ್ಲೆ ನಡೆಸಿರುವುದಿಲ್ಲ.

(ii) ನಂಜನಗೂಡು ತಾಲ್ಲೂಕು ಕುದುರೆ ಗುಂಡಿ ಹಳ್ಳದ ಕಾಮಗಾರಿಯಿಂದ ಮುಳುಗಡೆ ಯಾದ ರೈತರಿಗೆ ಪರಿಹಾರ

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೇ ನಂಜನಗೂಡು ತಾಲ್ಲೂಕು ಕುದುರೆಗುಂಡಿ ಹಳ್ಳ (ಆಣೆಕಟ್ಟು) ಕಾಮಗಾರಿ ಕೆಲಸ ಕೈಗೊಳ್ಳುವಾಗ ರೈತರ ಜಮೀನು ಮುಳುಗಡೆಯಾಗಿದೆ. ಮುಳುಗಡೆ ಯಾಗಿರುವ ರೈತರ ಜಮೀನುಗಳಲ್ಲಿ ಕೆಲವರಿಗೆ ಪರಿಹಾರ ದೊರಕಿಲ್ಲ. ಆದ್ದರಿಂದ ಕೂಡಲೇ ಪರಿಹಾರ ಕೊಡಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ. ಕುದುರೆಗುಂಡಿ ಆಣೆಕಟ್ಟಿನ ಕೆಲಸ ಕಳಪೆ ಮಟ್ಟದ್ದಾಗಿದೆ ಎಂದು ಸಾರ್ವಜನಿಕ ದೂರು ಬಂದಿದೆ. ಆದ್ದರಿಂದ ಮೇಲ್ಮಟ್ಟದ ಅಧಿಕಾರಿಗಳು ಸಮಗ್ರ ತನಿಖೆ ನಡೆಸಿ ವರದಿ ಪಡೆದ ನಂತರ ಪರಿಶೀಲಿಸಿ ಉಳಿಕೆ ಹಣವನ್ನು ಕಂಟ್ರಾಕ್ಟ್ ದಾರರಿಗೆ ಪಾವತಿ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ,